# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 785 |
| ಸದಸ್ಯರ ಹೆಸರು | : | ಶ್ರೀ. ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 23.07.2024 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ರೈತರು ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿದೆ |
| ಆ) | ತೋಟಗಾರಿಕೆ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಹಾಗೂ ಬೆಳೆದ ಬೆಳೆಯನ್ನು ಸಂರಕ್ಷಿಸಲು, ಮಾರಾಟ ಮಾಡಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ. | ತೋಟಗಾರಿಕೆ ಬೆಳೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಈ ಕೆಳಗಿನ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.<br>1. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ರದೇಶ ವಿಸ್ತರಣೆ.<br>2.ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಪ್ರದೇಶ ವಿಸ್ತರಣೆ.<br>3.ಹನಿ ನೀರಾವರಿ ಯೋಜನೆಯಡಿ ಹೆಚ್ಚಿನ ಇಳುವರಿ ಪಡೆಯಲು ರಸಾವರಿ ಪದ್ಧತಿಯ ಅಳವಡಿಕೆ.<br>4.ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ.<br>ತೋಟಗಾರಿಕೆ ಬೆಳೆಯನ್ನು ಸಂರಕ್ಷಿಸಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಸಹಾಯಧನ ನೀಡಲಾಗುತ್ತಿದೆ.<br>1) <u>ರಾಷ್ಟ್ರೀಯ ತೋಟಗಾರಿಕೆ ಮಿಷನ್</u> |

| ಕ್ರ.ಸಂ | ಘಟಕ | ವೆಚ್ಚ (ರೂ.ಲಕ್ಷಗಳಲ್ಲಿ) | ಸಹಾಯಧನದ ವಿವರ |
|---|---|---|---|
| 1 | ಪ್ಯಾಕ್ ಹೌಸ್ | ರೂ. 4.00 ಲಕ್ಷ | ಶೇ. 50 ರಂತೆ ರೂ. 2.00 ಲಕ್ಷ |

| | | | |
|---|---|---|---|
| 2 | **ಇಂಟಿಗ್ರೇಟೆಡ್ ಪ್ಯಾಕ್ ಹೌಸ್** | ರೂ. 50.00 ಲಕ್ಷ | ಶೇ. 35 ರಂತೆ ರೂ. 17.50 ಲಕ್ಷ |
| 3 | **ಶೀಥಲ ಕೊಠಡಿ ಘಟಕ** | ರೂ. 15.00 ಲಕ್ಷ | ಶೇ. 35 ರಂತೆ ರೂ. 5.25 ಲಕ್ಷ |
| 4 | **ಶೀಥಲ ಗೃಹ ಘಟಕ Type-1** | ರೂ. 8000.00/MT | ಶೇ. 35 ರಂತೆ ರೂ. 140.00 ಲಕ್ಷಗಳು ಗರಿಷ್ಠ 5000 MT |
| 5 | **ಶೀಥಲ ಗೃಹ ಘಟಕ Type-2** | ರೂ. 10000.00/MT | ಶೇ. 35 ರಂತೆ ರೂ. 175.00 ಲಕ್ಷಗಳು ಗರಿಷ್ಠ 5000 MT |
| 6 | **ಶೀಥಲ ವಾಹನ** | ರೂ. 26.00 ಲಕ್ಷ /9MT | ಶೇ. 35 ರಂತೆ ರೂ. 9.10 ಲಕ್ಷ |
| 7 | **ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ** | ರೂ. 1.75 ಲಕ್ಷ | ಶೇ. 50 ರಂತೆ ರೂ. 0.875 ಲಕ್ಷ |

## 2) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

| ಕ್ರ.ಸಂ | ಘಟಕ | ವೆಚ್ಚ (ರೂ.ಲಕ್ಷಗಳಲ್ಲಿ) | ಸಹಾಯಧನದ ವಿವರ |
|---|---|---|---|
| 1 | **ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ** | ರೂ. 1.75 ಲಕ್ಷ | ಶೇ. 50 ರಂತೆ ರೂ. 0.875 ಲಕ್ಷ |
| 2 | **ತೆಂಗು ಶೇಖರಣಾ ಘಟಕ** | ರೂ. 1.75 ಲಕ್ಷ | ಶೇ. 50 ರಂತೆ ರೂ. 0.875 ಲಕ್ಷ |

3) ತೋಟಗಾರಿಕೆ ಬೆಳೆಯನ್ನು ಮಾರಾಟ ಮಾಡಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಈ ಕೆಳಕಂಡಂತೆ ನೆರವು ಒದಗಿಸಲಾಗುತ್ತಿದೆ.

**a) ಸಗಟು ಮಾರುಕಟ್ಟೆ** – ಮಾರುಕಟ್ಟೆ ಸ್ಥಾಪನೆ ಮತ್ತು ಮಾರುಕಟ್ಟೆ ಉನ್ನತೀಕರಣಕ್ಕಾಗಿ ರೂ.100.00 ಕೋಟಿ ಯೋಜನಾ ವೆಚ್ಚಕ್ಕೆ ಶೇ.25 ರಂತೆ ಗರಿಷ್ಠ ರೂ 25.00 ಕೋಟಿಗಳ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

**b) ಗ್ರಾಮೀಣ ಮಾರುಕಟ್ಟೆ** - ಗ್ರಾಮೀಣ ಮಾರುಕಟ್ಟೆ ಸ್ಥಾಪನೆಗಾಗಿ ರೂ.25.00 ಲಕ್ಷಗಳ ಯೋಜನಾ ವೆಚ್ಚಕ್ಕೆ ಶೇ.40 ರಂತೆ ಗರಿಷ್ಠ ರೂ 10.00 ಲಕ್ಷಗಳ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

**c) ಚಿಲ್ಲರೆ ಮಾರುಕಟ್ಟೆ** - ಚಿಲ್ಲರೆ ಮಾರುಕಟ್ಟೆ ಸ್ಥಾಪನೆಗಾಗಿ ರೂ.15.00 ಲಕ್ಷಗಳ ಯೋಜನಾ ವೆಚ್ಚಕ್ಕೆ ಶೇ.35 ರಂತೆ ಗರಿಷ್ಠ ರೂ 5.25 ಲಕ್ಷಗಳ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ

4)ಪ್ರಮುಖ ತೋಟಗಾರಿಕೆ ಬೆಳೆಗಳ ಉತ್ಪಾದನೆ, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರಾಟ ವ್ಯವಸ್ಥೆಯ

| | | |
|---|---|---|
| | | ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ನಿಗಮ ಮತ್ತು ಮಂಡಳಿಗಳನ್ನು ಸ್ಥಾಪಿಸಲಾಗಿರುತ್ತದೆ.<br>a)ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ<br>b) ಕರ್ನಾಟಕ ರಾಜ್ಯ ದ್ರಾಕ್ಷಾರಸ ಮಂಡಳಿ<br>c) ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ<br>d) ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ (ನಿ)<br>e) ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ<br>ಸದರಿ ನಿಗಮ ಮತ್ತು ಮಂಡಳಿಗಳ ಮೂಲಕ ತೋಟಗಾರಿಕೆ ಬೆಳೆಗಳ ಅಭಿವೃದ್ಧಿ, ಮಾರಾಟ ಹಾಗು ರಫ್ತು ಉತ್ತೇಜಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>5) ರೈತ ಉತ್ಪಾದಕ ಸಂಸ್ಥೆಗಳ ಮೂಲಕ ತೋಟಗಾರಿಕೆ ಉತ್ಪನ್ನಗಳಿಗೆ ಮಾರಾಟ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.<br>6) ತೋಟಗಾರಿಕಾ ಉತ್ಪನ್ನಗಳನ್ನು ಮಾರಾಟ ಮಾಡಲು ನಗರ ವ್ಯಾಪ್ತಿಯಲ್ಲಿರುವ ಹಾಪ್ ಕಾಮ್ಸ್ ವ್ಯಾಪಾರ ಮಳಿಗೆಗಳ ರೀತಿಯಲ್ಲಿ ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಹಂತದ ಪಟ್ಟಣಗಳಲ್ಲಿ ಹಾಪ್ ಕಾಮ್ಸ್ ಮಳಿಗೆಗಳನ್ನು ಸ್ಥಾಪಿಸಲಾಗಿರುತ್ತದೆ. |
| ಇ) | ಪ್ರಸ್ತುತ ಸಾಲಿನಲ್ಲಿ ಈ ಎಲ್ಲಾ ತೋಟಗಾರಿಕೆ ಬೆಳೆಗಳ ಕಾರ್ಯಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ? (ವಿವರ ನೀಡುವುದು) | ಪ್ರಸ್ತುತ ಸಾಲಿನಲ್ಲಿ ವಿಜಯಪುರ ಜಿಲ್ಲೆಗೆ ತೋಟಗಾರಿಕೆ ಅಭಿವೃದ್ಧಿಗಾಗಿ ಒಟ್ಟು **ರೂ.3824.27 ಲಕ್ಷಗಳ** ಅನುದಾನವನ್ನು ನಿಗದಿಪಡಿಸಲಾಗಿದೆ. ಯೋಜನೆವಾರು ಒಟ್ಟು ಅನುದಾನದ ವಿವರಗಳು ಈ ಕೆಳಕಂಡಂತಿವೆ.<br>**ರೂ. ಲಕ್ಷಗಳಲ್ಲಿ** |

| ಕ್ರಮ ಸಂಖ್ಯೆ | ಯೋಜನೆ | ಅನುದಾನ |
|---|---|---|
| 1. | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ | 2267.79 |
| 2. | ರಾಷ್ಟ್ರೀಯ ತೋಟಗಾರಿಕೆ ಮಿಷನ್ | 1091.76 |
| 3. | ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ - ತಾಳೆ ಎಣ್ಣೆ | 111.03 |
| 4. | ತೋಟಗಾರಿಕೆಯಲ್ಲಿ ಯಾಂತ್ರೀಕರಣ | 28.05 |
| 5. | ಪರಂಪರಾಗತ ಕೃಷಿ ವಿಕಾಸ ಯೋಜನೆ | 184.58 |
| 6. | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ | 113.06 |

| | | | | |
|---|---|---|---|---|
| | | 7. | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣಾ ಯೋಜನೆ | 25.00 |
| | | 8. | ಮಧುವನ ಮತ್ತು ಜೇನುಸಾಕಾಣೆ ಅಭಿವೃದ್ಧಿ | 3.00 |
| | | | **ವಿಜಯಪುರ ಜಿಲ್ಲೆಗೆ ನಿಗದಿಯಾದ ಒಟ್ಟು ಅನುದಾನ** | **3824.27** |

HORTI 331 HGM 2024

S. S. [illegible]

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು